INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,28-36
Peer Reviewed Journal, Referred Journal

# ಕಪ್ಪಡಿ ರಾಚಪ್ಪಾಜಿ: ಸಾಂಸ್ಕೃತಿಕ ಸಂಘರ್ಷದ ಅನನ್ಯ ಪ್ರತಿಮೆ

**ಗಿರೀಶ ವೈ.ಎಸ್.**[1]
**ಡಾ. ವಿಜಯಲಕ್ಷ್ಮಿ**[2]

ಭಾರತವು ಹಲವು ಜಾತಿ, ಧರ್ಮ, ವರ್ಗಗಳಿಂದ ಕೂಡಿರುವ ಬಹುಸಂಸ್ಕೃತಿಯ ದೇಶ.ಇಲ್ಲಿನ 'ಸಾಂಸ್ಕೃತಿಕ ಚರಿತ್ರೆ'ಯನ್ನು ನಿರ್ದಿಷ್ಟವಾಗಿ ಅರ್ಥೈಸುವುದು ಅಷ್ಟು ಸುಲಭವಲ್ಲ. ಏಕೆಂದರೆ ಜಾತಿ, ಧರ್ಮಗಳಲ್ಲಿ ಮೇಲು-ಕೀಳು ಎಂಬ ತಾರತಮ್ಯ ಮನೋಭಾವವನ್ನು ಹೊಂದಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ 'ಸಾಂಸ್ಕೃತಿಕತೆ' ಎಂಬುದು ಕೇವಲ ವೈರುಧ್ಯಗಳಿಂದ ಕೂಡಿದೆ.ಜಾತೀಯತೆಯನ್ನು ಪ್ರತಿಪಾದಿಸುವ ಮೇಲ್ವರ್ಗದ 'ಸಾಂಸ್ಕೃತಿಕ ಚರಿತ್ರೆ' ಒಂದೆಡೆಯಿದ್ದರೆ, ಜಾತಿಯನ್ನು ನಿರಾಕರಿಸಿ ಸಮಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ ಮೌಖಿಕ ಪರಂಪರೆಯ 'ಸಾಂಸ್ಕೃತಿಕ ಚರಿತ್ರೆ' ಮತ್ತೊಂದೆಡೆ. ಹಾಗಾಗಿ ರಾಚಪ್ಪಾಜಿಯ ಸಾಂಸ್ಕೃತಿಕ ಅನನ್ಯತೆಯನ್ನು ಶೋಷಿತ ಜಾತಿಗಳ ಸ್ವಾಯತ್ತತೆಯ ನೆಲೆಯಿಂದ ಅರ್ಥ ಮಾಡಿಕೊಳ್ಳಲು ಜಾತೀಯತೆಯ ವಿನಾಶದ ತಾತ್ವಿಕತೆಯ ಹಿನ್ನೆಲೆಯಲ್ಲಿ 'ಸಾಂಸ್ಕೃತಿಕತೆ' ಎಂಬುದನ್ನು ವಿಭಿನ್ನ ಹಾಗೂ ವಾಸ್ತವದ ನೆಲೆಗಟ್ಟಿನಲ್ಲಿ ನೋಡಬೇಕಿದೆ.

'ಚರಿತ್ರೆ ಮತ್ತು ಸಾಂಸ್ಕೃತಿಕತೆ' ಎಂಬುದನ್ನು ದಾಖಲಾಗದ ಹಾಗೂ ಜನಪ್ರಿಯವಲ್ಲದ ನೆಲೆಗಳಿಂದ ಅರ್ಥೈಸಿಕೊಳ್ಳುವುದು ಅವಶ್ಯಕ.ಏಕೆಂದರೆ ಶಿಕ್ಷಣ ವಂಚಿತ ಹಾಗೂ ಶೋಷಿತ ತಳಸಮುದಾಯದವರಿಗೆ 'ಚಾರಿತ್ರಿಕ ಪ್ರಜ್ಞೆ' ಇಲ್ಲ ಎಂಬ ಮನೋಭಾವವನ್ನು ಹೊಂದಿರುವ ಮೇಲ್ವರ್ಗದವರಿಗೆ 'ಜ್ಞಾನ ಪರಂಪರೆ' ಎಂಬುದು ಹುಟ್ಟಿರುವುದೇ ತಳಸಮುದಾಯಗಳಲ್ಲಿ (ಜನಪದರಲ್ಲಿ) ಎಂಬುದನ್ನು ಮನದಟ್ಟು ಮಾಡಬೇಕಿದೆ.ಈ ನಿಟ್ಟಿನಲ್ಲಿ ಕಪ್ಪಡಿ ರಾಚಪ್ಪಾಜಿಯು ಅರಸು ಮನೆತನದಲ್ಲಿ ಹುಟ್ಟಿ ನಂತರ ಮಂಟೇಸ್ವಾಮಿಯವರ ಶಿಶುಮಗನಾಗಿ ಶೋಷಿತರಿಗೆ ಸ್ವ-ವ್ಯಕ್ತಿತ್ವವನ್ನು ಕಟ್ಟಿಕೊಡಲು ಪ್ರಯತ್ನಿಸಿದ ಒಬ್ಬ ಸಾಂಸ್ಕೃತಿಕ ನಾಯಕನಾಗಿ ಕಂಡುಬರುತ್ತಾರೆ.

## ಕಪ್ಪಡಿ ರಾಚಪ್ಪಾಜಿಯ ಸಾಂಸ್ಕೃತಿಕ ಅನನ್ಯತೆ

ಜನಪದ ಮಹಾಕಾವ್ಯಗಳು ಇಂದಿಗೂ ಮೌಖಿಕ ಸ್ಥಿತಿಯಲ್ಲಿಯೇ ತಮ್ಮ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿರುವುದರಿಂದ ಹಾಗೂ ಬುಡಕಟ್ಟಿನ ಜನರು ನಾಗರೀಕತೆಯ ಮುನ್ನೆಲೆಗೆ ಬರದೆ

---

1.ಸಂಶೋಧಕರು, ಜಾನಪದ ವಿಭಾಗ, ಮಹಾರಾಜ ಕಾಲೇಜು,ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

2 . ಸಹ ಪ್ರಾಧ್ಯಾಪಕರು, ಜಾನಪದ ವಿಭಾಗ ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

ಇರುವುದರಿಂದ ಆಯಾ ವರ್ಗದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅವರದೇ ಆದ ಭಾಷೆಯ ಮೂಲಕ ಜೀವಂತವಾಗಿಸಿದ್ದಾರೆ. ಇದು ಯಾರದೋ ಲಾಭಕ್ಕಾಗಿ ಅಥವಾ ಒತ್ತಾಯಪೂರ್ವಕವಾಗಿ ಬೆಳವಣಿಗೆಯಾಗಿರುವುದಲ್ಲ. ಬದಲಾಗಿ ನಮ್ಮ ಜನಪದರ ಸಾಂಸ್ಕೃತಿಕ ಅಸ್ಮಿತೆಯನ್ನು ಮುಂದಿನ ಪೀಳಿಗೆಗೆ ಸಾರುವ ನಿಟ್ಟಿನಲ್ಲಿ ನಡೆದುಕೊಂಡು ಬರುತ್ತಿರುವ ಸಾಂಸ್ಕೃತಿಕ ಕಾವ್ಯ ಪರಂಪರೆಯಾಗಿದೆ. ನಮ್ಮ ಎಷ್ಟೋ ಮಹಾಕಾವ್ಯಗಳು ಇಂದಿಗೂ ಬೆಳೆದು ಸಮೃದ್ಧಿಯಾಗುತ್ತಿರುವುದು ಅವುಗಳು ಪಡೆದುಕೊಂಡಿರುವ ಮೌಖಿಕ ಸಂಸ್ಕೃತಿಯಿಂದಾಗಿಯೇ ಹೊರತು, ಅಕ್ಷರರೂಪಿ ಸಂಸ್ಕೃತಿಯಿಂದಲ್ಲ. ಹಾಗಾಗಿ ಕರ್ನಾಟಕ ಜನಪದ ಮಹಾಕಾವ್ಯಗಳಲ್ಲಿ 'ಮಂಟೇಸ್ವಾಮಿಕಾವ್ಯ'ವು ಹೆಚ್ಚು ಜನಪ್ರಿಯತೆ ಪಡೆದಿರುವ ಹಾಗೂ ವಿಶಿಷ್ಟವಾದ ತಾತ್ವಿಕತೆಯನ್ನು ಹೊಂದಿರುವ ಜನಪದ ಮಹಾಕಾವ್ಯವಾಗಿದೆ. ಈ ಕಾವ್ಯವು 'ನೀಲಗಾರ'ರೆಂಬ ವೃತ್ತಿಗಾಯಕರಿಂದ ಅನಾವರಣಗೊಂಡಿದ್ದು, ಇವರನ್ನು ಮಂಟೇದವರು, ಮಂಟೇಸ್ವಾಮಿಗಳು, ಮಂಟೇದಯ್ಯಗಳು ಎಂದೂ ಕರೆಯುತ್ತಾರೆ.ಇವರ ಪುಣ್ಯ ಕ್ಷೇತ್ರಗಳು ಮಂಡ್ಯ ಜಿಲ್ಲೆಯ ಬೊಪ್ಪೇಗೌಡನಪುರದ ಮಂಟೇಸ್ವಾಮಿ ಮಠ, ಕೆ.ಆರ್ ನಗರ ತಾಲ್ಲೂಕಿನ ಶ್ರೀ ಕ್ಷೇತ್ರ ಕಪ್ಪಡಿ, ಚಿಕ್ಕಲ್ಲೂರು ಹಾಗೂ ಮಳವಳ್ಳಿ. ಇವರ ಆರಾಧ್ಯ ದೈವ ಮಂಟೇಸ್ವಾಮಿ, ಸಿದ್ಧಪ್ಪಾಜಿ, ಹಾಗೂ ಕಪ್ಪಡಿ ರಾಚಪ್ಪಾಜಿ.ಇವರ ಸಾಂಸ್ಕೃತಿಕ ಸಂಕೇತ 'ಕಂಡಾಯ' ಹಾಗೂ 'ನಾಗರ ಬೆತ್ತ'.ಇವರು ಬಳಸುವ ಪಕ್ಕ ವಾಧ್ಯ ಕುದುರೆ ತಲೆಯಾಕಾರದ ಮಟ್ಟಸವಾದ ನಾಲ್ಕು ತಂತಿಯ 'ತಂಬೂರಿ' ಹಾಗೂ 'ಜಾಗಟೆ'.ಇವರು ಧರಿಸುವ ಉಡುಪು ಕೆಂಪು ಪೇಟ, ಕರಿಯ ನಿಲುವಂಗಿ ಅಥವಾ ಕರಿಯ ಕೋಟು, ಬಿಳಿಯ ವಲ್ಲಿ, ಕಚ್ಚೆ ಪಂಚೆ ಹಾಗೂ ಹೆಗಲಿಗೊಂದು ಜೋಳಿಗೆ.ಈ ನೀಲಗಾರ ವೃತ್ತಿಗಾಯಕರು ಚಾಮರಾಜನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ದಟ್ಟವಾಗಿಯೂ, ಬೆಂಗಳೂರು ಜಿಲ್ಲೆಯಲ್ಲಿ ವಿರಳವಾಗಿಯೂ ಕಂಡುಬರುತ್ತಾರೆ.

ಜಾತಿ ವ್ಯವಸ್ಥೆಯ ಕರಾಳ ಕೂಪದಿಂದ ಭಾರತೀಯ ಸಮಾಜ ಶತಶತಮಾನಗಳಿಂದಲೂ ನರಳುತ್ತಲೇ ಬಂದಿದೆ. ಜಾತಿ ಮತ್ತು ಪಂಗಡಗಳು ಮಾನವನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೆಳಣಿಗೆಯನ್ನು ಕುಂಟಿತಗೊಳಿಸಿವೆ. ಸಾಂಸ್ಕೃತಿಕ ಅನನ್ಯತೆ ಹಾಗೂ ಸಾಮಾಜಿಕ ಐಕ್ಯತೆ ಹೊಂದಲುತೊಡಕುಂಟು ಮಾಡಿವೆ. ಸುಮಾರು 2600 ವರ್ಷಗಳ ಹಿಂದೆ ಭಗವಾನ್ ಬುದ್ಧ ಜಾತ್ಯತೀತ ಧರ್ಮವನ್ನು ಅನುಸರಿಸಿದನು. ಮೇಲ್ವರ್ಗದವರ ವರ್ಣವ್ಯವಸ್ಥೆಯಿಂದಾಗಿ ನಲುಗಿಹೋಗಿದ್ದ ಜನರು ಮೊದಲ ಬಾರಿಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಪಡೆದರು.ಆದರೆ ವರ್ಣ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದ್ದ ಮೇಲ್ವರ್ಗದವರು ಈ ದೇಶದ ಮೂಲ ಧರ್ಮವಾದ ಬೌದ್ಧ ಧರ್ಮವು ಪರಕೀಯವಾಗುವಂಥ ಪರಿಸ್ಥಿತಿ ನಿರ್ಮಾಣ ಮಾಡಿದರು.

ಸುಮಾರು 14, 15ನೇ ಶತಮಾನದ ವೇಳೆಗೆ ಭಾರತದ ಮೂಲ ಧರ್ಮವಾದ ಬೌದ್ಧ ಧರ್ಮ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿ ತಲುಪಿತು.ಜೈನ ಧರ್ಮ ಕೂಡ ದುರ್ಬಲವಾಗಿತ್ತು. ಶೈವ ಧರ್ಮದಲ್ಲಿ ಸ್ವಯಂ ಹಿಂಸಾಭಕ್ತಿ ವಿಜೃಂಭಿಸುತ್ತಿತ್ತು.ದೈವಗಳಿಗೆ ಪ್ರಾಣಿಬಲಿ, ನರಬಲಿ ಮತ್ತು ಆತ್ಮ ಸಮರ್ಪಣೆಯಂಥ ಹಿಂಸಾತ್ಮಕ ಆಚರಣೆಗಳು ಪ್ರಚಲಿತಕ್ಕೆ ಬಂದಿದ್ದವು.ಜನರು ತಾವು ದುಡಿದದ್ದನ್ನೆಲ್ಲಾ ದೈವಗಳ ಸಂಪ್ರೀತಿಗಾಗಿ ವಿನಿಯೋಗಿಸುವಂಥ ದುಃಸ್ಥಿತಿ ನಿರ್ಮಾಣವಾಗಿತ್ತು. ಜಾತಿ ಧರ್ಮಗಳ ನಡುವಿನ ಕೀಳರಿಮೆ, ಅಸ್ಪೃಷ್ಯತೆ, ಹಿಂಸಾಭಕ್ತಿ, ರಾಜರುಗಳ ಅನಿರ್ಧಿಷ್ಟ ತೆರಿಗೆ. ಮುಂತಾದವುಗಳಿಂದ ದುಡಿಯುವ ವರ್ಗದವರ ಬದುಕು ಜರ್ಜರಿತವಾಗಿತ್ತು.

ಇಂಥ ಅಲ್ಲೋಲಕಲ್ಲೋಲ. ವಾತಾವರಣವಿದ್ದ ಸಂದರ್ಭದಲ್ಲಿ ಅಂದರೆ ಸುಮಾರು 14, 15ನೇ ಶತಮಾನದಲ್ಲಿ ಉತ್ತರ ಭಾಗದಲ್ಲಿ ಕೊಡೇಕಲ್ಲು ಬಸವಣ್ಣನ ಪರಂಪರೆ ಹಾಗೂ ದಕ್ಷಿಣ ಭಾಗದಲ್ಲಿ ಮಂಟೇಸ್ವಾಮಿ ಪರಂಪರೆ ಅಸ್ಥಿತ್ವಕ್ಕೆ ಬಂದಿತು.ಉತ್ತರದ ಕೊಡೇಕಲ್ಲು ಬಸವಣ್ಣನು ರಾಜನಾಗಿದ್ದು, ಸಕಲ ವೇದ, ಶಾಸ್ತ್ರ, ಪುರಾಣಗಳನ್ನು ಅಭ್ಯಾಸ ಮಾಡಿ, ಬ್ರಾಹ್ಮಣ್ಯದಲ್ಲಿರುವ ಗುಣದೋಷಗಳನ್ನು ಅರಿತಿದ್ದನು. ಹಾಗಾಗಿ ಕೊಡೇಕಲ್ಲು ಬಸವಣ್ಣನು ಸ್ವತಃ ತಾನೇ'ಅಮರಗನ್ನಡ ಲಿಪಿ' ಎಂಬ ವಿನೂತನ ಲಿಪಿಯನ್ನು ಸೃಷ್ಟಿ ಮಾಡಿ, ಅದರ ಮೂಲಕ ಹಲವು ವಚನಗಳನ್ನು ಬರೆದು, ಒಬ್ಬ ಸಾಮಾಜಿಕ ಕಳಕಳಿಯುಳ್ಳ ವಚನಕಾರನಾಗಿ ಗುರುತಿಸಿಕೊಳ್ಳುತ್ತಾನೆ. ಇದನ್ನು ಅರಿತ ಮಂಟೇಸ್ವಾಮಿಯ ಗುರುಗಳಾದ 'ಗುರುಬಾರಲಿಂಗಯ್ಯ'ನವರು ಮಂಟೇಸ್ವಾಮಿಗೆಕೊಡೇಕಲ್ಲು ಬಸವಣ್ಣನ ಬಳಿ ಹೋಗಿ ಸಿದ್ಧಿಯನ್ನು ಪಡೆದುಕೊಂಡು ಬರುವಂತೆ ಆಜ್ಞಾಪಿಸುತ್ತಾರೆ. ಗರುಗಳ ಮಾತಿನಂತೆ ಮಂಟೇಸ್ವಾಮಿಯು ಕೊಡೇಕಲ್ಲಿಗೆ ಆಗಮಿಸಿ ಕೊಡೇಕಲ್ಲು ಬಸವಣ್ಣ ಹಾಗೂ ಅವರ ಪತ್ನಿ ನೀಲಾಂಬಿಕೆಗೆ ಗೋಚರವಾಗುವ ಸನ್ನಿವೇಶವನ್ನು ಜನಪದರು ವರ್ಣರಂಜಿತವಾಗಿ ಕಾವ್ಯ ಕಟ್ಟಿ ಹಾಡಿದ್ದಾರೆ.ಈ ಸಂದರ್ಭದಲ್ಲಿ ಮಂಟೇಸ್ವಾಮಿಯು ರಾಚಪ್ಪಯ್ಯನನ್ನು ಭೇಟಿಯಾಗಿ ಅವನ ಸಾಹಿತ್ಯ ಜ್ಞಾನ ಹಾಗೂ ಸಮಾಜದ ಮೇಲಿನ ಕಳಕಳಿಯನ್ನು ಅರಿತು, ಶಿಶುಮಗನನ್ನಾಗಿ ಪಡೆಯುತ್ತಾರೆ.ರಾಚಪ್ಪಾಜಿಯು ಒಬ್ಬ ರಾಜನ ಮಗನಾಗಿದ್ದರೂ ಈ ನಾಡಿನಲ್ಲಿ ಒಂದು ಪಿಡುಗಾಗಿ ಆವರಿಸಿದ್ದ ವರ್ಣವ್ಯವಸ್ಥೆ ಹಾಗೂ ಧಾರ್ಮಿಕ ತಾರತಮ್ಯದ ವಿರುದ್ಧದ ನಿಲುವನ್ನು ಹೊಂದಿದ್ದರು.

ರಾಚಪ್ಪಾಜಿಯ ಪೂರ್ವದ ಕಥೆಯನ್ನು 'ನಂದಿಯಾಗಮಲೀಲೆ' ಹೇಳಿದರೆ ಆತನ ಉತ್ತರೋತ್ತರ ಜೀವನದ ಕಥೆಯನ್ನು ಮಂಟೇಸ್ವಾಮಿ ಕಾವ್ಯ ಹೇಳುತ್ತದೆ. ಕೊಡೇಕಲ್ಲಿನಲ್ಲಿರುವಾಗಲೇ ಮಂಟೇಸ್ವಾಮಿಯ ಸಂಬಂಧವು ರಾಚಪ್ಪಯ್ಯನಿಗಿರುವುದು ಸುಸ್ಪಷ್ಟವಾಗಿದೆ.ಸ್ವತಃ ಮಂಟೇಸ್ವಾಮಿಯು ರಾಚಪ್ಪಾಜಿಯ ಘನವಾದ ಯೌಗಿಕ ವ್ಯಕ್ತಿತ್ವವನ್ನು ಕುರಿತು ಒಂದು ವಚನ ವಾಕ್ಯವನ್ನೇ ಬರೆದಿದ್ದಾರೆ.

**“ಸದಮಲ ಯೋಗಿಯ ಕಂಡೆ ಸುಧೆಯ ನಿರುಪಮನೆನ್ನ**

**ಹೃದಯ ಕಮಲದಲ ಝೇಂಕರಿಪ ಮಧುಕರನ**

**ಅಣಿಮಾದಿ ಸಿದ್ಧಿಗಳನಾಳು ಮಂಟೇದಲಿಂಗ**

**ಪ್ರಣಮ ಜ್ಯೋತಿಯ ರಾರಾಜಿಸುವ ರಾಚಯೋಗಿ”**

ಪ್ರತಿಭಾನ್ವಿತನೂ, ಮಹಾಯೋಗಿಯೂ ಆದ ರಾಚಪ್ಪಯ್ಯ ಕೊಡೇಕಲ್ಲ ಪರಂಪರೆ ಹಾಗೂ ಮೌಖಿಕ ಮಂಟೇಸ್ವಾಮಿ ಪರಂಪರೆಗಳೆರಡರಲ್ಲೂ ಮುಖ್ಯನಾಗಿದ್ದಾನೆ. ರಾಚಪ್ಪಯ್ಯನ ಉತ್ತರ ಜೀವನ ಕಥನವನ್ನು ‘ಧರೆಗೆ ದೊಡ್ಡವರ’ ಕಥೆಯು ವಿಶದಪಡಿಸುತ್ತದೆ. ತಾಳಿಕೋಟೆಯ ಸರಶೆಟ್ಟಿ ಮನೆತನದ ಹೆಣ್ಣನ್ನು ರಾಚಪ್ಪಾಜಿಗೆ ತಂದುಕೊಂಡರೆಂದು ಹೇಳುವ ಕೊಡೇಕಲ್ಲ ಐತಿಹ್ಯವು ಅವಳ ಹೆಸರನ್ನು ಹೇಳುವುದಿಲ್ಲ. ಆದರೆ ‘ಜನಪದ ಕಾವ್ಯ’ವು ಕಾಗಿನೆಲೆಯ ‘ದೊಡ್ಡಮ್ಮತಾಯಿ’ಯನ್ನು ರಾಚಪ್ಪಾಜಿಯ ಪತ್ನಿ ಎಂದು ಹೇಳುತ್ತದೆ. ಇನ್ನೊಂದು ಜನಪದ ಪಠ್ಯವು ಮೈಸೂರು ಅರಮನೆಯಿಂದ ದೊಡ್ಡಮ್ಮತಾಯಿಯನ್ನು ತಂದಿರುವುದಾಗಿ ಹೇಳುತ್ತದೆ.ಕಾಗಿನೆಲೆಯ ಸಂಬಂಧವು ರಾಚಪ್ಪಯ್ಯನಿಗೆ ಹಲವು ಬಗೆಯಲ್ಲಿದೆ.ಬಳ್ಳಿಗಾವಿಯ ಪಂಚವಣ್ಣಿಗೆ ಮಠದ ಮಹದೇವಮ್ಮ ಅಥವಾ ನೀಲಮ್ಮಳು ರಾಚಪ್ಪಯ್ಯನ ತಾಯಿಯಾಗಿದ್ದಾಳೆ.ರಾಚಪ್ಪಯ್ಯನ ತಮ್ಮನಾದ ಸಂಗಮನಾಥನು ಕಾಗಿನೆಲೆಯನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಲ್ಲಿಯೇ ನೆಲೆಯಾಗಿದ್ದಾನೆ.

ತಾಯಿ–ತಮ್ಮನ ಸಂಬಂಧಗಳಲ್ಲದೆ ಕನಕದಾಸ ಮತ್ತು ರಾಚಪ್ಪಾಜಿಯ ವಾಗ್ವಾದದ ಐತಿಹ್ಯವೊಂದು ಜನಪ್ರಿಯವಾಗಿದೆ. ಈ ಐತಿಹ್ಯದ ಪ್ರಕಾರ ಕನಕದಾಸರು ಒಗಟಿನ ಸಮಸ್ಯೆ ತೆಗೆದುಕೊಂಡು ಕೊಡೇಕಲ್ಲಿಗೆ ಬಂದು ಊರ ಹೊರಗಿನ ದಾರಿಯಲ್ಲಿ ಸಾಂದರ್ಭಿಕವಾಗಿ ಮಾರುವೇಷದಲ್ಲಿ ಕುರಿ ಕಾಯುತ್ತಿದ್ದ ರಾಚಪ್ಪಾಜಿಯ ಜೊತೆ ಮಾತನಾಡುತ್ತಾರೆ.ತನ್ನ ಸಮಸ್ಯೆ ಹೇಳಿಕೊಂಡು ರಾಚಪ್ಪಾಜಿ ಎಲ್ಲಿದ್ದಾನೆಂದು ಆತನನ್ನೇ ಕೇಳುತ್ತಾನೆ. ಆಗ ರಾಚಪ್ಪಾಜಿ ತನ್ನ ಜನಪ್ರಿಯ ಹಾಡು ‘ನಾವು ಕುರುಬರು’ ಪದ್ಯ ಹೇಳುತ್ತಾ ಕುರಿಗಳ ಕಡೆ ಸಾಗುತ್ತಾರೆ. ಅಲ್ಲಿಂದ ಕನಕದಾಸರು ಕೊಡೇಕಲ್ಲ ಬಸವಣ್ಣನ ಮನೆಗೆ ಬಂದು ರಾಚಪ್ಪಾಜಿಯನ್ನು ಕಾಯುತ್ತಾ ಕೂರುತ್ತಾನೆ. ಸಂಜೆಯಾಗುತ್ತಿದ್ದಂತೆ ಅರಮನೆಗೆ ಬಂದ ರಾಚಪ್ಪಾಜಿಯನ್ನು ನೋಡಿ, ಊರ ಹೊರಗೆ ವಾದಿಸಿದವನೇ ಇವನು ಎಂದು ಅಚ್ಚರಿ ವ್ಯಕ್ತಪಡಿಸಿ, ತನ್ನೊಡನೆ ಕಾಗಿನೆಲೆಗೆ ಕರೆದೊಯ್ಯಲು ಬಯಸುತ್ತಾನೆ. ಆಗ ರಾಚಪ್ಪಾಜಿ ಹೋಗದೆ ಸಂಗಮನಾಥನನ್ನು ಕಳುಹಿಸಿದನೆಂದೂ, ಆತ ಮರಳಿ ಬಾರದೆ ಅಲ್ಲೆ ಉಳಿದುಕೊಂಡನೆಂದೂ ಹೇಳಲಾಗುತ್ತದೆ. ಈ ಐತಿಹ್ಯಗಳ ಸತ್ಯಾಸತ್ಯತೆಗಳು ಏನೇ ಇದ್ದರೂ ರಾಚಪ್ಪಯ್ಯನ ಕಾಗಿನೆಲೆಯ ಸಂಬಂಧವನ್ನು ಮತ್ತು ಕನಕದಾಸರ ಭೇಟಿಯನ್ನು ಕುರಿತು ಈ ಐತಿಹ್ಯ ಸಮರ್ಥನೆಯನ್ನು ನೀಡುತ್ತದೆ.

'ಮಂಟೇಸ್ವಾಮಿ ಕಾವ್ಯ'ವನ್ನು ಉಲ್ಲೇಖಿಸಿ ನೋಡಿದಾಗ ರಾಚಪ್ಪಾಜಿಯು ಮಂಟೇಸ್ವಾಮಿಯ ಮೊದಲ ಸಾಲಿನ ಶಿಶುಮಗನಾಗಿ ಕಂಡುಬರುತ್ತಾರೆ. ರಾಚಪ್ಪಾಜಿಯು ರಚಿಸಿರುವ ಸಾಹಿತ್ಯ ಕೃತಿಗಳು ಹಾಗೂ ಮಂಟೇಸ್ವಾಮಿ ಕಾವ್ಯದಲ್ಲಿ ನಿರೂಪವಾಗಿರುವ 'ರಣಮೋಡಿ' ಹಾಗೂ 'ಮಾರನಾಯಕ'ನ ವದೆಯಂತಹ ಘಟನೆಗಳು ಕನ್ನಡ ಸಾಂಸ್ಕೃತಿಕ ಜಗತ್ತನ್ನೇ ಬೆಚ್ಚಿಬೀಳಿಸುತ್ತವೆ. ಜಾತೀಯತೆಯನ್ನು ನಿರಾಕರಿಸಿ ಎಲ್ಲಾ ಜಾತಿಯ, ಧರ್ಮದ ಜನರನ್ನು ಒಕ್ಕಲು ಪಡೆದಿರುವ ಈ ಪರಂಪರೆ ತಳಸಮುದಾಯಗಳ ಸಂಘರ್ಷ ಮತ್ತು ಸ್ವಾಭಿಮಾನದ ಚಳವಳಿಯಂತೆ ಗೋಚರವಾಗುತ್ತದೆ. ಜೊತೆಗೆಶೋಷಿತ ಜಾತಿಗಳ ಸಾಂಸ್ಕೃತಿಕ ಅಸ್ಮಿತೆಯ ಘನ ರೂಪದಂತಿರುವ ಈ ಪರಂಪರೆ ಸಾಮಾಜಿಕ ಸಮಾನತೆಯನ್ನು ಕಾಯ್ದುಕೊಂಡು ಬಂದಿದೆ. ಈ ದಿಸೆಯಿಂದ ರಾಚಪ್ಪಾಜಿ ಸಾಂಸ್ಕೃತಿಕ ಸಂಘರ್ಷದ ಅಪ್ರತಿಮ ವ್ಯಕ್ತಿಯಾಗಿ ಕಂಡುಬರುತ್ತಾರೆ.

ರಾಚಪ್ಪಾಜಿಯು ತಳಸಮುದಾಯಗಳ 'ಸಮಾನತೆ' ಪರಿಕಲ್ಪನೆಯನ್ನು ತಾತ್ವಿಕ ನೆಲೆಯಲ್ಲಿ ಗುರುತಿಸಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಕೆಳಜಾತಿಗಳಿಗೆ ಕೇವಲ ಭೌತಿಕ ಸವಲತ್ತುಗಳನ್ನು ನೀಡುವುದೇ ಸಮಾನತೆ ಎಂಬ ಆಧುನಿಕ ಸಮಾಜದ ಮಿತಿಗಳನ್ನು ಮೀರಿ ಶೋಷಣೆ ಹಾಗೂ ಅದರ ವಿರುದ್ಧದ ಹೋರಾಟವನ್ನು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಹಕ್ಕೊತ್ತಾಯದ ನೆಲೆಯಲ್ಲಿ ಈ ಪರಂಪರೆ ಸಂಘಟಿಸಿದೆ.ಅಸ್ಪೃಶ್ಯ ಜಾತಿಯವರು ಎಲ್ಲಾ ರಂಗಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಮಾಡುವುದರ ಮೂಲಕ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ವಚಿಸುವ ಕ್ರಮವೇ ಭಾರತೀಯ ಸಾಮಾಜಿಕ ಚರಿತ್ರೆಯು ಭಿನ್ನವಾಗಿ ಕಾಣಲು ಸಾಧ್ಯವಾಗುತ್ತದೆ.

ರಾಚಪ್ಪಾಜಿಯು ತಮ್ಮ 'ಸುವ್ವಿ' ವಚನದಲ್ಲಿ ಅಂದಿನ ಕಾಲದ ರಾಜ ಮಹಾರಾಜರ ಅಸ್ಥಿತ್ವ ಮತ್ತು ರಾಜಕೀಯ ಮೇಲಾಟಗಳನ್ನು ಕುರಿತು ಕಾವ್ಯಾತ್ಮಕ ಶೈಲಿಯಲ್ಲಿ ವ್ಯಂಗ್ಯ ಮಾಡಿರುವುದನ್ನು ಕಾಣಬಹುದಾಗಿದೆ.

**"ರಾಜ ರಾಜರ ಮನೆಯ ಬೀಜ ನಾಶಗಳಕ್ಕು**

**ಕಾಜಿನ ಒಲೆಯಂತೆ ಉರಿದಾರು! ಕೇಳುವೊಡೆ**

**ತೇಜಿ ಬೆನ್ನಟ್ಟಿ ಬರುತಾವೆ**

**ಉತ್ತರ ನಿಬ್ಬಣವು ಸತ್ತಿಗೆಯ ನೆರಳಲ್ಲಿ**

**ಕತ್ತಿ ಖಾಂಡ್ಯಗಳು ಬಿಸಲೂಟ! ಗೋಕುಲಕೆ**

**ಕಿತ್ತ್ಯಾರು ಅಭಯ ಸೆರೆಸೂರೆ"**.

ಈ ಕಾವ್ಯವನ್ನು ರಾಚಪ್ಪಾಜಿಯು 15ನೇ ಶತಮಾನದಲ್ಲಿದ್ದ ರಾಜ ಮಹಾರಾಜರುಗಳ ಸ್ಥಿತಿಗತಿಯನ್ನು ವಿಡಂಬಿಸುತ್ತಾ ಹೇಳುತ್ತಾರೆ.

ರಾಜ ರಾಜರುಗಳ ನಡುವಿನ ರಾಜಕೀಯ ಯುದ್ಧಗಳು, ದಾಳಿಗಳು ತಂದ ಆತಂಕಕಾರಿ ವ್ಯವಸ್ಥೆಯನ್ನು, ಭಯದ ಸ್ವರೂಪವನ್ನು, ನಿಸರ್ಗದ ವಿಕೋಪವನ್ನು, ಬರಗಾಲವನ್ನು ದೇಹದ ವಿಕಾರಗಳಿಗೆ ಕಾರಣವಾಗುವ ರೋಗ-ರುಜಿನಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಕತ್ತಿ ಖಾಂಡ್ಯಗಳು ಝಳಪಿಸುವ ಸಂದರ್ಭದಲ್ಲಿ ಅಭಯದ ಸ್ಥಿತಿಯೇ ಇಲ್ಲದಿರುವಾಗ ಧಾರ್ಮಿಕ ಅಭಯದ ಅಸ್ತಿತ್ವವೊಂದನ್ನು ಅಭಿವ್ಯಕ್ತಿಸಿಕೊಳ್ಳಲಾಗಿದೆ.ಈ ಕಾರಣಗಳಿಂದ ಆ ಕಾಲದ ರಾಜಕೀಯ ಸ್ಥಿತಿಗತಿಗಳ ಸ್ವರೂಪವನ್ನು ಹಾಗೂ ಧಾರ್ಮಿಕ ವ್ಯವಸ್ಥೆಯಿಂದ ತಳಸಮುದಾಯಗಳಲ್ಲಿ ಸೃಷ್ಟಿಯಾಗಿದ್ದ ಕೀಳರಿಮೆಯನ್ನು ಸ್ಥೂಲವಾದ ಸಮೀಕ್ಷೆಯಲ್ಲಿ ಗ್ರಹಿಸಿಕೊಳ್ಳುವುದು ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಉಪಯುಕ್ತವೆಂದು ತೋರುತ್ತದೆ.

ಗೊತ್ತಿದ್ದೋ ಗೊತ್ತಿಲ್ಲದೆಯೋ ಹಿಂದೂ ಧರ್ಮದೊಳಗೆ ಬೆರೆತೋಗಿರುವ ಹಾಗೂ ತಳಸಮುದಾಯಗಳ ಮೇಲೆ ಹೇರಿರುವ ಏಕರೂಪಿ ಸಾಂಸ್ಕೃತಿಕ ಚರಿತ್ರೆಯನ್ನು ಎದುರಾಗಲು ಮಂಟೇಸ್ವಾಮಿ ಹಾಗೂ ರಾಚಪ್ಪಾಜಿಯವರ ಸಾಂಸ್ಕೃತಿಕ ಹಿನ್ನೆಲೆ ಮುಖ್ಯವಾಗುತ್ತದೆ.ತಾವು ಮಾಡುವ ಕಾಯಕದ ಮೂಲಕ ಕಸುಬುದಾರರೆಲ್ಲರೂ ಒಂದು ಕುಲವಾಗಿ ಸಮೀಕರಣಗೊಳ್ಳುವ ತಾತ್ವಿಕತೆಯನ್ನು ಈ ಪರಂಪರೆಯೊಳಗೆ ಪರಿಶೀಲಿಸಿರುವ ಬಂಜಗೆರೆ ಜಯಪ್ರಕಾಶ್ ರವರು 'ಶೋಷಿತ ಸಮುದಾಯಗಳ ಸಂಸ್ಕೃತಿಯು ಈ ಬಗೆಯ ಸಾಮಾಜಿಕ ಸಾಮರಸ್ಯದ ಸಂಕಥನಗಳನ್ನು ಒಳಗೊಂಡಿದೆ ಎಂಬುದನ್ನು ತಾತ್ವಿಕವಾಗಿ ವಿವರಿಸಿದ್ದಾರೆ'.ಜಾಗತೀಕರಣದ ಯುಗವು ನಮ್ಮ ದೇಸೀ 'ವೃತ್ತಿಕಸುಬು'ಗಳು ಹಾಗೂ 'ಜ್ಞಾನ ಕೌಶಲ್ಯ'ವನ್ನು ಗೌಣಗೊಳಿಸುತ್ತಿರುವ ಈ ಹೊತ್ತಿನಲ್ಲಿ 'ಕಾಯಕ ಜೀವಿಗಳ ತಾತ್ವಿಕತೆ'ಯ ಈ ಪರಂಪರೆ ಶೋಷಿತರೆಲ್ಲರನ್ನು ಜಾಗೃತಗೊಳಿಸಿ ಒಳಗೂಡಿಸುವ ದೇಸಿ ಸಮಾಜವಾದದ ಚರಿತ್ರೆಯಾಗಿ ಆಕರ್ಷಿಸುತ್ತಿದೆ. ಅಲ್ಲದೆ ಅಂದು ಅಂಬೇಡ್ಕರ್ ಅವರು ಬುದ್ಧನೆಡೆಗೆ ಧಾವಿಸಿದಂತೆ, ಇಂದು ವೈಚಾರಿಕರು ಹಾಗೂ ಚಳವಳಿಗಾರರು ಈ ಪರಂಪರೆಯತ್ತ ಗಮನಹರಿಸುತ್ತಿರುವುದು ನಿಜವಾದ ಚರಿತ್ರೆಯತ್ತ ಮರಳಿದಂತಾಗುತ್ತಿದೆ.

ರಾಚಪ್ಪಾಜಿಯ ಸಾಹಿತ್ಯ ಕೃತಿಗಳಾಗಲಿ, ಕಾವ್ಯದ ತಾತ್ವಿಕತೆಯಾಗಲಿ, ಆಚರಣೆಯಾಗಲಿ, ಸಂಘರ್ಷದ ನೆಲೆಗಳಾಗಲಿ ಇವುಗಳೆಲ್ಲವೂ ಪರಂಪರೆಯ ಸಾಂಸ್ಕೃತಿಕ ನೆಲೆಯ ಭಾಗಗಳಾಗಿಯೇ ಕಂಡುಬರುತ್ತವೆ. ಆದರೆ ಇತ್ತೀಚಿನ ಚಳವಳಿಗಳು 'ಜಾತಿ ವಿನಾಶದ' ಪರಿಕಲ್ಪನೆಯನ್ನು ಹದಗೆಡಿಸಿಬಿಟ್ಟಿವೆ. ಚಳವಳಿ ಎಂದಾಕ್ಷಣ ದೇವರ ವಿಗ್ರಹಗಳನ್ನು ಭಗ್ನಗೊಳಿಸುವುದು, ದೇವಾಲಯಗಳನ್ನು ಕೆಡವುವುದು, ಧರ್ಮದ ವಿರುದ್ಧ ಧಿಕ್ಕಾರ ಕೂಗುವುದು ಇಷ್ಟಕ್ಕೆ ಸೀಮಿತಗೊಳಿಸಿವೆ. ಈ ರೀತಿಯ ಹೋರಾಟಗಾರರು

ಅವಲಂಬಿಸರುವ ಸಿದ್ಧಾಂತಗಳೆಂದರೆ ಯೂರೋಪಿನ ಮಾರ್ಕ್ಸ್‌ವಾದ, ಮಾನವತಾವಾದ ಹಾಗೂ ವೈಚಾರಿಕತೆ. ಇಂತಹ ವೈಚಾರಿಕ ಹೋರಾಟಗಳು ಸಾಮಾಜಿಕ ಕಳಕಳಿಯನ್ನು ಹೊಂದಿದ್ದರೂ, ಸಾಂಸ್ಕೃತಿಕವಾಗಿ ಏನನ್ನೂ ರೂಪಿಸಲು ಸಾಧ್ಯವಾಗಿಲ್ಲ. ಆದರೆ ಮಂಟೇಸ್ವಾಮಿ ಹಾಗೂ ರಾಚಪ್ಪಾಜಿಯಂತಹ ಸಾಂಸ್ಕೃತಿಕ ನಾಯಕರು ಆಧ್ಯಾತ್ಮದ ನೆಲೆಯಲ್ಲಿಯೇ 'ಸಂಸ್ಕೃತಿಗೆ ಪ್ರತಿಸಂಸ್ಕೃತಿ'ಯನ್ನು ರೂಪಿಸಿ ತಳಸಮುದಾಯದವರಿಗೆ ಒಂದು ಸಾಂಸ್ಕೃತಿಕ ಅನನ್ಯತೆಯನ್ನು ಸೃಷ್ಟಿಸಿದರು.

ಜಾತೀಯತೆಯನ್ನು ನಿರ್ಮೂಲನೆ ಮಾಡುವ ಕಲ್ಪನೆ ಕೇವಲ ಅನ್ಯ ಜಾತಿಗಳನ್ನು ದ್ವೇಷಿಸುವುದರ ಮೇಲೆ ನಿಲ್ಲದೆ, ಅವರ ಮನಸ್ಸನ್ನು ಪರಿವರ್ತಿಸಿ ಮನುಷ್ಯರೆಲ್ಲರೂ ಸಮಾನರು ಎಂಬ ಭಾವನೆಯನ್ನು ಮೂಡಿಸುವುದು ಪ್ರಸ್ತುತವಾಗಿದೆ. ರಾಚಪ್ಪಾಜಿಯು ಈ ಬಗೆಯಲ್ಲಿ ಉಗ್ರವಾದ ಸಾಮಾಜಿಕ ಹಾಗೂ ಆಧ್ಯಾತ್ಮಿಕ ದಂಗೆಕೋರತನದ ದ್ವೈತ್ಯ ಪ್ರತಿಮೆಯಾಗಿದ್ದಾರೆ. ರಾಚಪ್ಪಾಜಿಯ ಗುರುಗಳಾದ ಮಂಟೇಸ್ವಾಮಿಯು 'ಲಿಂಗ'ವು ಜಾತಿ ಸೂಚಕ ಸಂಕೇತವಾದಾಗ ಅಂತಹ ಲಿಂಗವನ್ನು 'ಹೆಂಡದ ಗಡಿಗೆ'ಯಲ್ಲಿ ಹಾಕಿ, ಕೊತ್ತಿಗೆ ಲಿಂಗ, ನಾಯಿಗೆ ಲಿಂಗ ಎಂದು ಕಲ್ಯಾಣದ ಪ್ರತಿಷ್ಟಿತರ ಲಿಂಗವನ್ನು ಅಪಮೌಲ್ಯೀಕರಿಸಿದರು. ಇದರಿಂದ 'ಲಿಂಗ' ಎಂಬುದು ಪ್ರತಿಯೊಂದು ಜೀವಿಯ 'ಆತ್ಮದಲ್ಲಿರುವ ಜ್ಯೋತಿ'ಯೇ ವಿನಹ ಒಂದು ಜಾತಿ ಸೂಚಕ ವಸ್ತುವಲ್ಲ ಎಂದು ಜಗಕ್ಕೆ ಸಾರಿದರು.ಸಾಮಾನ್ಯ ಜನರಿಗೆ ಆಧ್ಯಾತ್ಮದ ಅವಶ್ಯಕತೆಯಿದೆಯೆ ಹೊರತು ಮೌಢ್ಯದ ಆಚರಣೆಗಳಲ್ಲ ಎಂಬುದನ್ನು ಪ್ರತಿಪಾದಿಸಲಾಗಿದೆ.

ಒಬ್ಬ ಸಾಮಾನ್ಯ ವ್ಯಕ್ತಿ ಜನರ ಮನಸ್ಸಿನಲ್ಲಿ ದೈವತ್ವದ ಸ್ಥಾನ ಪಡೆಯುವುದು ಅಷ್ಟು ಸುಲಭವಲ್ಲ. ಸಮೂಹ ಸಂಗತವಾದ ಸಾಮಾಜಿಕ ಬದುಕನ್ನು ಬದುಕುವಾಗ ಉಂಟಾಗುವ ಸಮಸ್ಯೆಗೆ ಎದುರಾಗುವ ದುಃಖವನ್ನು, ಅಸಹಾಯಕತೆಯನ್ನು ಹಾಗೂ ಅದರ ಹತಾಶ ಸ್ಥಿತಿಯನ್ನು ಮೀರಲು ಪರ್ಯಾಯವಾಗಿ ಸೃಷ್ಟಿಸಿಕೊಳ್ಳುವ ಇಂತಹ ಆಧ್ಯಾತ್ಮಿಕ ದೈವೀಕರಣದ ಕ್ರಿಯೆಯು ಒಂದು ದೊಡ್ಡ ಸಾಧನೆಯೆ ಆಗುತ್ತದೆ. ತಮ್ಮ ಎಲ್ಲಾ ಸಂಘರ್ಷವನ್ನು ಆತ್ಮಿಕ ಹಾಗೂ ದೈವಿಕ ಸ್ವರೂಪನಾದ ವರ್ತಮಾನದ ದೇವರು ಪರಿಹರಿಸುತ್ತಾನೆಂಬ ಅಪೇಕ್ಷೆಯನ್ನು ಈ ಹಿನ್ನೆಲೆಯಲ್ಲಿ ಹೇಳಬಹುದಾಗಿದೆ.ಸಾಂಸ್ಕೃತಿಕ ಒತ್ತಡದಲ್ಲಿ ಬದುಕುತ್ತಿರುವ ಸಮುದಾಯಕ್ಕೆ ಸಾಮಾನ್ಯ ಮನುಷ್ಯನ ಬದುಕನ್ನು ಗಟ್ಟಿಯಾಗಿ ಅಪ್ಪಿಕೊಳ್ಳುವ ಇಂತಹ ದೈವೀಕರಣದ ರಕ್ಷಣೆಯು ಮಾನಸಿಕವಾದ ಶಕ್ತಿ ಸಂಚಯನದ ಕ್ರಿಯೆಯಾಗುತ್ತದೆ.ಈ ಕಾರಣಕ್ಕಾಗಿ ಈ ಎಲ್ಲಾ ಸಾಂಸ್ಕೃತಿಕ ನಾಯಕರುಗಳು ತಮ್ಮ ಧಾರ್ಮಿಕ ಸ್ವರೂಪದ ದೈವವನ್ನು ರಕ್ಷಕನ ರೂಪದಲ್ಲಿ ಕಟ್ಟಿಕೊಂಡಿದ್ದಾರೆ.ಅಷ್ಟೆ ಅಲ್ಲದೆ ಕಾಲಾತೀತವಾದ ನೆಲೆಯಲ್ಲಿ 12ನೇ ಶತಮಾನದ ವಚನಕಾರರಾದ

ಬಸವಣ್ಣ, ಅಲ್ಲಮಪ್ರಭು ಮತ್ತು ಚೆನ್ನಬಸವಣ್ಣನವರನ್ನು ಕೂಡ ಸ್ಮೃತಿಲೋಕದಿಂದ ತಂದು ದೈವವಾಗಿಸಲಾಗಿದೆ.

ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ 'ಆಧ್ಯಾತ್ಮ' ಎಂಬುದು ತುಂಬಾ ಅವಶ್ಯಕ. ಮನಸ್ಸಿನಲ್ಲಿರುವ ಜಂಜಾಟ, ಮಾನಸಿಕ ಅಸ್ಥಿರತೆ, ದ್ವೇಷ, ಅಸೂಯೆಗಳನ್ನು ನಾಶ ಮಾಡುವ ಏಕೈಕ ಅಸ್ತ್ರವೆಂದರೆ ಅದು 'ಆಧ್ಯಾತ್ಮ'.ಇದು ಮನಸ್ಸನ್ನು ಸದೃಢಗೊಳಿಸುವುದಲ್ಲದೆ ಸಾಂಸ್ಕೃತಿಕವಾಗಿ ಸಮನ್ವಯತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.ಹಾಗಾಗಿಯೇ ರಾಚಪ್ಪಾಜಿಯು ಆಧ್ಯಾತ್ಮದ ನೆಲೆಯಲ್ಲಿಯೆ ಎಲ್ಲಾ ಸಮುದಾಯದ ಜನರನ್ನು ಸಂಘಟಿಸಿ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ. ಹೀಗೆ ಎಲ್ಲರೂ ಒಂದೇ ಎಂಬ ತತ್ವಾದರ್ಶನವನ್ನು ಸಮರ್ಥವಾಗಿ ಸ್ವೀಕರಿಸಿ 'ಕಪ್ಪಡಿ ಕ್ಷೇತ್ರ'ದಲ್ಲಿ ನೆಲೆಗೊಂಡು, ತನ್ನ ಒಕ್ಕಲಿನ ಮೂಲಕ ಸಾಂಸ್ಕೃತಿಕ ಅಸ್ಮಿತೆಯು ಚಲನಶೀಲವಾಗಿರುವಂತೆ ಕಾಯ್ದುಕೊಂಡಿದ್ದಾರೆ.

ನೀಲಗಾರರು ಎಂಬ ಹೆಸರಿನಿಂದ ಅನಾವರಣಗೊಂಡಿರುವ ಈ ಪರಂಪರೆಯು ತನ್ನ ಸಾಂಸ್ಕೃತಿಕ ಅನನ್ಯತೆಯ ಲಕ್ಷಣದಿಂದ ಇಂದಿನವರೆಗೂ ಉಳಿದುಕೊಂಡು ಬಂದಿದೆ.ಈ ಪರಂಪರೆಯನ್ನು ಚಾರಿತ್ರಿಕ ಪಂಥವನ್ನಾಗಿ ರೂಪಿಸಿದವರಲ್ಲಿ 'ಮಂಟೇಸ್ವಾಮಿ' ಹಾಗೂ 'ರಾಚಪ್ಪಾಜಿ' ಪ್ರಮುಖರು.ಇವರಲ್ಲಿ ಕಪ್ಪಡಿ ಕ್ಷೇತ್ರದ ಮಹಿಮೆಗೆ ರೂವಾರಿಯಾದವರು 'ರಾಚಪ್ಪಾಜಿ'.ಇವರು ತಮ್ಮ ಆಧ್ಯಾತ್ಮಿಕ ಮನೋಬಲದಿಂದ ಹಾಗೂ ಸಮುದಾಯದ ಮೇಲಿನ ಕಾಳಜಿಯಿಂದ ತಮ್ಮ ಜ್ಞಾನವನ್ನು ಪರಂಪರೆಗಾಗಿ ಮೀಸಲಾಗಿಸಿದ್ದರು.ಇವರು ತಮ್ಮ ಕಾಲದ ಸಾಮಾನ್ಯ ಮನುಷ್ಯನ ಅಸ್ಥಿತ್ವದ ಎದುರಾಳಿಗಳಾದ ಪ್ರಭುತ್ವ ಮತ್ತು ಮೂಲಭೂತ ಧಾರ್ಮಿಕ ಸಂಸ್ಥೆಗಳನ್ನು ಒಡೆದುಹಾಕಿ ಹೊಸದಾದ ತಾತ್ವಿಕ ಅನುಭಾವದ ಆಶಯಗಳನ್ನು ರೂಪಿಸಿದ್ದರು.

ವಸಾಹತುಶಾಹಿ ಅಧ್ಯಯನ ಶಿಸ್ತುಗಳ ಫಲವಾಗಿ ಬಹುತೇಕ ಚರಿತ್ರೆ, ಸಾಹಿತ್ಯ, ಸಂಸ್ಕೃತಿಗಳು ಕೋಮುವಾದಿ ಸಂರಚನೆಯನ್ನು ಹೊಂದಿರುವಂತೆಮುಂದೊಂದು ದಿನ ಈ ಪರಂಪರೆಯು ಅದೇ ದಾರಿ ಹಿಡಿಯುವ ಸಾಧ್ಯತೆಯಿದೆ. ಹಾಗಾಗಿ ತಳಸಮುದಾಯಗಳಿಗೆ ಒಂದು ಸಾಂಸ್ಕೃತಿಕ ಚಹರೆಯನ್ನು ನೀಡಿರುವ ಇಂತಹ ಬಹು ಸಂಸ್ಕೃತಿಯ, ದೇಶಿ ನೆಲೆಯ ಆಕೃತಿಗಳನ್ನು, ಆಶಯಗಳನ್ನು, ತತ್ವ, ಸಿದ್ಧಾಂತಗಳನ್ನು ಪ್ರಸ್ತುತದ ಅಗತ್ಯಕ್ಕೆ ತಕ್ಕ ಹಾಗೆ ನಿರ್ವಚಿಸಿಕೊಳ್ಳುವ ಬಹುಶಿಸ್ತೀಯ ಪ್ರಯತ್ನಗಳು ನಡೆಯಬೇಕಿದೆ. ಆ ಮೂಲಕ ನಮ್ಮ ತಳಮೂಲ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಿದಂತಾಗುತ್ತದೆ.

## ಪರಾಮರ್ಶನ ಗ್ರಂಥಗಳು


1. ಡಾ.ವೆಂಕಟೇಶ ಇಂದ್ವಾಡಿ, (ಸಂ)ಮಂಟೆಸ್ವಾಮಿ ಕಾವ್ಯ–ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
2. ಬಿ. ಎಸ್ ಸಣ್ಣಯ್ಯ, (ಸಂ) ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸುರು, 1988.
3. ಡಾ.ಶಿವಾನಂದ.ಎಸ್.ವಿರಕ್ತಮಠ(ಸಂ)–ಅಮರ ಕಲ್ಯಾಣ,ನುಡಿ ಪ್ರಕಾಶನ,ಹೊಸಪೇಟೆ, 2005.
4. ಶಾರದಾ ಮುಳ್ಳೂರು,(ಸಂ)–ಆರೂಢ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
5. ಡಾ.ಹಿ.ಚಿ.ಬೋರಲಿಂಗಯ್ಯ,ಕರ್ನಾಟಕ ಜನಪದ ಮಹಾಕಾವ್ಯ,(ಸಂ)ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018.
6. ಡಾ.ವಿಜಯ್ ಪೂಣಚ್ಚ ತಂಬಂಡ,(ಸಂ)–ವರ್ಗದಿಂದ ಸಂಸ್ಕೃತಿಯೆಡೆಗೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2017.
7. ಮಾಂಬಳ್ಳಿ ಮಹಾದೇವು.ಕೆ,–ಧರೆಗೆ ದೊಡ್ಡವರು ಶ್ರೀ ಮಂಟೇಸ್ವಾಮಿ,(ಸಂಪಾದಕ ಮತ್ತು ಪ್ರಕಾಶಕ) ಮೈಸೂರು, 2018.
8. ಡಾ.ಹಿ.ಚಿ.ಬೋರಲಿಂಗಯ್ಯ,(ಸಂ)–ದೇಸಿ ಕನ್ನಡ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2016.